Q.P. Code – 50101

ಪ್ರಥಮ ಬಿ.ಎ./ಬಿ.ಕಾಂ./ಬಿ.ಎಸ್ಸಿ., ಪದವಿ ಪರೀಕ್ಷೆ

ಸೆಪ್ಟೆಂಬರ್/ಅಕ್ಟೋಬರ್ 2013

(ದೂರ ಶಿಕ್ಷಣ)

ಕನ್ನಡ ಭಾಷಾ ಪತ್ರಿಕೆ – ೧

**(DAA/DCA/DSA 010) – ಹೊಸಗನ್ನಡ ಕವಿತೆಗಳು, ಶೂದ್ರ ತಪಸ್ವಿ, ಬೆಟ್ಟದ ಜೀವ, ಆಡಳಿತ ಕನ್ನಡ**

*ಸಮಯ : 3 ಗಂಟೆಗಳು]* *[ಗರಿಷ್ಠ ಅಂಕಗಳು : 70/80*

1. (ಅ) **ಒಂದರ** ಭಾವ ಸ್ವಾರಸ್ಯವನ್ನು ಸಂದರ್ಭದೊಡನೆ ವಿವರಿಸಿ : **4**

(೧) ಬೊಬ್ಬೆಯ ಹಬ್ಬಿಸಿ ಒಂದೇ ಬಾರಿಗೆ
ಉಬ್ಬರ ಎಬ್ಬಿಸಿ ಕಡಲಿನ ನೀರಿಗೆ
ಬೊಬ್ಬುಳಿ ತೆರೆಯನು ದಡಕ್ಕೆ ಹೊಮ್ಮಿಸಿ
ಅಬ್ಬರದಲಿ ಭೋರ್ ಭೋರನೆ ಗುಮ್ಮಿಸಿ
ಬರುತಿದೆ, ಮೈತೋರದೆ ಬರುತಿದೆ! ಅದೆ!

(೨) ತೊಡೆವಮ್ ಅಧರ್ಮಮಂ
ರಾಮರಾಜ್ಯದೊಳ್ ಅಧರ್ಮಮೆ ಮೃತ್ಯು
ಅಧರ್ಮ ಸಂಹಾರಮೆ ಮೃತ್ಯು ವಿಜಯಂ
ಆರನಗೆಲ್ ಯಮನ ಸೋಲ್!
ಬರ್ದುಕಲ್ ಧರ್ಮಂ ಬರ್ದುಕುವನ್ ನಿನ್ನಣುಗನ್!

(ಆ) **ಎಂಟು** ಪದಗಳಿಗೆ ಅರ್ಥ ಬರೆಯಿರಿ : **4**

ಪಾರ್ವ, ನಿಕುಂಜ, ನೇಸರ, ಬಿಂಕ, ಸೊಣಗ, ಸಮರ
ಅಳಲು, ಓಜ, ಮೆಹರುಬಾನಿ, ವಿಪಿನ, ಜಿಹ್ವೆ, ಸೈಪು.

(ಇ) **ಎರಡು** ವಿಷಯಗಳಿಗೆ ಟಿಪ್ಪಣಿ ಬರೆಯಿರಿ : **4**

(೧) ಗಂಧರ್ವ ಸೀಮೆ

(೨) ಶಂಬೂಕ

(೩) ಹಗಲು ವೇಷದ ಯಜಮಾನ



ಪು.ತಿ.ನೋ.

## Q.P. Code – 50101

2. **ನಾಲ್ಕಕ್ಕೆ** ಸಂದರ್ಭ ಸೂಚಿಸಿ ಟಿಪ್ಪಣಿ ಬರೆಯಿರಿ : **4 × 3 = 12**

   (೧) ಇದು ಬರೀ ಬೆಳಗಲ್ಲೋ ಅಣ್ಣಾ!

   (೨) ನಗೆ ಕೊಲ್ಲುವಂತೆ ಹಗೆ ಕೊಲ್ಲಲಾರದು

   (೩) ಬೆಳಗಿಂದ ಸಂಜೆಯ ತನಕ ಲಕ್ಷಚಕ್ರದ ಉರುಳು

   (೪) ಕೃತಯುಗದೊಳ್ ತಪಕ್ಕರ್ಹರ್ ಬ್ರಾಹ್ಮಣರ್ ಮಾತ್ರಂ

   (೫) ಆರಾದರೇನ್? ಆರಾಧ್ಯರ್ ತಪೋಧನರ್!

   (೬) ಶೂದ್ರನಪ್ಪಡೊಂ ತಪಂ ಶಕ್ತಿದಾಯಕಂ.

3. 'ಕರುಣೆ ಒಲುಮೆಗೆ ಸಾಟಿಯೇ'? ಈ ಮಾತನ್ನು 'ನನ್ನ ನಾಯಿ' ಕವಿತೆಯ ಮೂಲಕ ವಿವರಿಸಿ. **8**

   ಅಥವಾ

   'ಬೆಳೆಯುವ ಪೈರು ಭಾದ್ರಪದದೊಳೆ ಸುಟ್ಟು ಹೋದಂತೆ' 'ಮದಲಿಂಗನ ಕಣಿವೆ' ಕವನದ ಹಿನ್ನೆಲೆಯಲ್ಲಿ ಈ ಹೇಳಿಕೆಯನ್ನು ವಿವರಿಸಿ.

4. ವರ್ಣಾಶ್ರಮ ಧರ್ಮಕ್ಕಿಂತ ಮನುಷ್ಯ ಧರ್ಮ ಮುಖ್ಯ ಎನ್ನುವ ಕಾಳಜಿ 'ಶೂದ್ರ ತಪಸ್ವಿ' ನಾಟಕದಲ್ಲಿ ಹೇಗೆ ವ್ಯಕ್ತವಾಗಿದೆ? **8**

   ಅಥವಾ

   ಶೂದ್ರನ ತಪಸ್ಸಿಗೂ ಬ್ರಾಹ್ಮಣ ಕುಮಾರನ ಸಾವಿಗೂ ಇರುವ ಸಂಬಂಧವೇನು? ಚರ್ಚಿಸಿ.

5. (೧) ಗೋಪಾಲಯ್ಯ ಮತ್ತು ಶಂಕರಮ್ಮನ ದಾಂಪತ್ಯ ಜೀವನದ ಸೊಗಸನ್ನು ವಿವರಿಸಿ. **10**

   ಅಥವಾ

   ಗೋಪಾಲಯ್ಯನವರ ಜೀವನೋತ್ಸಾಹವನ್ನು ವಿವರಿಸಿ.

   (೨) ಶಂಕರಮ್ಮ, ದೇರಣ್ಣ – ಇವರ ಪಾತ್ರ ಪರಿಚಯ ಮಾಡಿ. **10**

   ಅಥವಾ

   'ಕಾಡಿನ ಪರಿಸರ ಗೋಪಾಲಯ್ಯನವರ ಬದುಕನ್ನು ಸಾಹಸಕ್ಕೊಡ್ಡಿದೆ' ಈ ಹೇಳಿಕೆಯನ್ನು ವಿವರಿಸಿ.

6. (ಅ) ಜ್ಞಾಪನಾ ಪತ್ರ ಎಂದರೇನು? **2**

   (ಆ) ಜಾಹೀರಾತು ಮತ್ತು ಪ್ರಕಟಣೆಯ ಉದ್ದೇಶವನ್ನು ವಿವರಿಸಿ. **4**

   (ಇ) ಸುತ್ತೋಲೆ ಎಂದರೇನು? ಮಾದರಿ ಪತ್ರದೊಂದಿಗೆ ವಿವರಿಸಿ. **4**

7. ಯಾವುದಾದರೂ **ಒಂದು** ಪ್ರಶ್ನೆಗೆ ಉತ್ತರಿಸಿ. (**80** ಅಂಕಗಳ ಸ್ಕೀಂನವರಿಗಾಗಿ **ಕಡ್ಡಾಯ** ಪ್ರಶ್ನೆ) : **10**

   (೧) ಸರ್ಕಾರಿ ಪತ್ರದ ವಿವಿಧ ಅಂಗಗಳನ್ನು ಮಾದರಿ ಪತ್ರದೊಂದಿಗೆ ವಿವರಿಸಿ.

   ಅಥವಾ

   (೨) ಅರೆ ಸರ್ಕಾರಿ ಪತ್ರ ಎಂದರೇನು? ಮಾದರಿ ಪತ್ರವನ್ನು ಬರೆಯಿರಿ.

---